






## ಬ್ರಿಟಿಷರ ‘ಯಲ್ಲಾಪುರ’ ಹೆಜ್ಜೆಗುರುತು

ನಿತ್ಯಹರಿದ್ವರ್ಣ ಕಾಡಿನಿಂದಾಗಿ ಚಾರಣಿಗರನ್ನು ಆಕರ್ಷಿಸುತ್ತಿರುವ ಯಲ್ಲಾಪುರ ಒಂದಾನೊಂದು ಕಾಲದಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿ ಹೆಚ್ಚು ಅಭಿವೃದ್ಧಿಗೊಂಡಿತ್ತು. ಈಸ್ಟ್ ಇಂಡಿಯಾ ಕಂಪನಿಯು 19ನೇ ಶತಮಾನದ ಆರಂಭದಲ್ಲಿ ಈ ಪ್ರದೇಶದ ಮೇಲೆ ಸಾಕಷ್ಟು ನಿಯಂತ್ರಣ ಹೊಂದಿತ್ತು.

ನಿತ್ಯಹರಿದ್ವರ್ಣ ಕಾಡಿನಿಂದಾಗಿ ಮತ್ತು ಹೇರಳವಾದ ವನ್ಯಜೀವಿಗಳಿಂದಾಗಿ ಖ್ಯಾತಿ ಪಡೆದಿದ್ದ ಯಲ್ಲಾಪುರದ ಅರಣ್ಯ ಪ್ರದೇಶದಲ್ಲಿ ಆಗ ಹುಲಿಗಳು ಹೇರಳವಾಗಿ ಕಾಣಿಸಿಕೊಳ್ಳುತ್ತಿದ್ದವು. ಹುಲಿಗಳು ಜನರ ಮೇಲೆ ದಾಳಿ ಮಾಡುತ್ತಿದ್ದ ಘಟನೆಗಳು ಆಗೆಲ್ಲಾ ಹೆಚ್ಚಾಗಿ ನಡೆಯುತ್ತಿದ್ದವಂತೆ. ಜನರ ಮೇಲೆ ದಾಳಿ ಮಾಡುತ್ತಿದ್ದ ಹುಲಿಗಳನ್ನು ಬೇಟೆಯಾಡಿದವರಿಗೆ ಬಹುಮಾನವಾಗಿ ನಿವೇಶನಗಳನ್ನು ಬ್ರಿಟಿಷರು ನೀಡುತ್ತಿದ್ದರು. ಹೀಗೆ ನಿವೇಶನಗಳನ್ನು ಬಹುಮಾನವಾಗಿ ಪಡೆದ ಹಲವು ಕುಟುಂಬಗಳು ಇನ್ನೂ ಯಲ್ಲಾಪುರದಲ್ಲಿ ವಾಸಿಸುತ್ತಿವೆ. ಒಂದು ಕಾಲಕ್ಕೆ ‘ಹುಲಿಗಳ ರಾಜ್ಯ’ವಾಗಿದ್ದ ಯಲ್ಲಾಪುರದಲ್ಲಿ ಈಗ ಬೆರಳೆಣಿಕೆಯಷ್ಟೇ ಹುಲಿಗಳು ಉಳಿದಿರುವುದು ದುರಂತವೇ ಸರಿ.

ಯಲ್ಲಾಪುರ ಸಮೀಪದ ಇಡುಗುಂಡಿಯ ಭಾಗವು ಬ್ರಿಟಿಷರ ಆಳ್ವಿಕೆಯಲ್ಲಿ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. 1896ರಲ್ಲಿ ಬಂದಂತಹ ಮಹಾಮಾರಿ ಪ್ಲೇಗ್ ರೋಗದಿಂದಾಗಿ ಅಲ್ಲಿನ ಜನ ಗುಳೆ ಹೋದರೆನ್ನುವುದು ಸಾರ್ವಜನಿಕರ ಮಾತು. ಯಲ್ಲಾಪುರ ಮತ್ತು ಮುಂಡಗೋಡ ಮಾರ್ಗದ ಮಧ್ಯದಲ್ಲಿರುವ ಸಿಡ್ಲುಗುಂಡಿ ಗ್ರಾಮದಲ್ಲಿ ಬ್ರಿಟಿಷರು ಕಟ್ಟಿಸಿದಂತಹ ಸಂಪೂರ್ಣ ಕಬ್ಬಿಣದ ಸೇತುವೆ ಇತ್ತು. ಅದು ಶಿಥಿಲಗೊಂಡಿದ್ದರಿಂದ 2010ರಲ್ಲಿ ಅದನ್ನು ತೆರವುಗೊಳಿಸಿ ಮರುನಿರ್ಮಿಸಲಾಗಿದೆ. ಹುಲಿಗಷ್ಟೇ ಅಲ್ಲದೆ ತೇಗದ ಮರಗಳಿಗೂ ಹೆಸರುವಾಸಿಯಾಗಿದ್ದ ಯಲ್ಲಾಪುರ ಅರಣ್ಯ ಉತ್ಪನ್ನಗಳ ಪ್ರಮುಖ ಉತ್ಪಾದನಾ ಕೇಂದ್ರವಾಗಿತ್ತು. ತಮ್ಮ ಕಾರ್ಯಾಚರಣೆಗೆ ಹಾಗೂ ಮೇಲ್ವಿಚಾರಣೆಗೆ ಅನುಕೂಲವಾಗಲೆಂದು ಯಲ್ಲಾಪುರದ ಹಲವೆಡೆ ಹಲವಾರು ಆಡಳಿತ ಕಚೇರಿಗಳನ್ನು ಬ್ರಿಟಿಷರು ಸ್ಥಾಪಿಸಿದ್ದರು. ಅವರ ಅವಧಿಯಲ್ಲಿ ಪಟ್ಟಣವು ಗಮನಾರ್ಹ ಅಭಿವೃದ್ಧಿ ಕಂಡಿತ್ತು.

ಬ್ರಿಟಿಷರು ಕಲ್ಪಿಸಿದ ಹಾಗೂ ನಿರ್ಮಿಸಿದ ಮೂಲಸೌಕರ್ಯಗಳು ಮತ್ತು ಕಟ್ಟಡಗಳ ಕುರುಹುಗಳನ್ನು ಈಗಲೂ ಯಲ್ಲಾಪುರದಲ್ಲಿ ಕಾಣಬಹುದಾಗಿದೆ. ಅವರು ನಿರ್ಮಿಸಿದ್ದ ಎಲ್ಲ ಕಟ್ಟಡಗಳನ್ನು ಅರಣ್ಯ ಇಲಾಖೆಯ ಸುಪರ್ದಿಗೆ ಒಪ್ಪಿಸಲಾಗಿದೆ. ಯಾವುದೂ ಶಾಶ್ವತವಲ್ಲ ಎಂಬುದಕ್ಕೆ ಉದಾಹರಣೆಯಂತಿರುವ ಬ್ರಿಟಿಷರು ನಿರ್ಮಿಸಿದ ಕಟ್ಟಡಗಳು ದಿನೇ ದಿನೇ ಶಿಥಿಲಗೊಳ್ಳುತ್ತಿವೆ. ಅವು ಇನ್ನು ಕೆಲವೇ ವರ್ಷಗಳಲ್ಲಿ ತಮ್ಮ ಮೂಲ ಸ್ವರೂಪ ಕಳೆದುಕೊಂಡು ಕಣ್ಮರೆಯಾದರೂ ಆಶ್ಚರ್ಯವಿಲ್ಲ.

ಯಲ್ಲಾಪುರದ ಹತ್ತಿರದಲ್ಲಿರುವ ದೇಹಳ್ಳಿಯಲ್ಲಿ ಕೂಡ ಬ್ರಿಟಿಷರ ಒಂದು ಬಂಗಲೆ ಇದ್ದು, ಅದನ್ನು ಈಗ ಅರಣ್ಯ ಇಲಾಖೆಯ ಅತಿಥಿಗೃಹವನ್ನಾಗಿ ಬದಲಾಯಿಸಲಾಗಿದೆ. ಬ್ರಿಟಿಷರ ಇರುವಿಕೆಯ ಕುರುಹುವಾಗಿ ಕೆಲವರಿಗೆ ಇಂಗ್ಲೆಂಡಿನ ರಾಣಿಯ ಚಿತ್ರವಿರುವ ನಾಣ್ಯಗಳು ಸಿಕ್ಕಿದ ಉದಾಹರಣೆಗಳೂ ಇಲ್ಲಿವೆ.

–ನಿರೀಕ್ಷಾ ಆಚಾರ್ಯ, ಯಲ್ಲಾಪುರ